ಈ) ಕಟ್ಟಡವನ್ನು ಯಾವಾಗ ಪೂರ್ತಿ ಪೂರೈಸಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಎ) ತಾದು-ಗ್ರಾಮಾಂತರ ಉಗ್ರಾಣವನ್ನು ಕಟ್ಟಲು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಅ) ಈ ಬಗ್ಗೆ ಏನ್‌ಸಿಡಿಸಿಯಿಂದ ಮಂಜೂರಾದ ಹಣ ರೂ. ೭೫,೦೦೦-೦೦ ಮಾತ್ರ. ಆದರಲ್ಲಿ ಸರಕಾರದಿಂದ ರೂ. ೫೬,೫೦೦-೦೦ ಮೊದಲನೆಯ ಕಂತಿನ ರೂಪದಲ್ಲಿ ಬಿಡುಗಡೆ ಮಾಡಲು ಮಂಜೂರಾಗಿದೆ.

ಇ) ಸಬ್ಸಿಡಿ ಇರುವುದು ರೂ. ೯೯,೨೦೦-೦೦ ಅದರಲ್ಲಿ ಸರಕಾರದಿಂದ ಮಂಜೂರಾದ ಮೊದಲ ಕಂತಿನ ಹಣ ರೂ. ೧೪,೬೦೦-೦೦ ಕಟ್ಟಡದ ಕೆಲಸ ಸಂಘದವರೇ ಮಾಡಿಕೊಂಡು ಅಡಿಪಾಯ ಮಟ್ಟಕ್ಕೆ ಬಂದಾಗ ಸಂಘದ ಆಡಳಿತ ಮಂಡಳಿಯಲ್ಲಿ ಭಿನ್ನಾಭಿಪ್ರಾಯ ಬಂದಿದ್ದಕ್ಕೆ ನಿಂತು ಹೋಗಿತ್ತು.

ಈ) ಕಟ್ಟಡವನ್ನು ೧೯೮೩-೮೪ನೇ ಆರ್ಥಿಕ ವರ್ಷಾಂತ್ಯದೊಳಗೆ ಪೂರೈಸುವ ನಿರೀಕ್ಷೆ ಇದೆ.

ಬಸವ ಕಲ್ಯಾಣಕ್ಕೆ ನೀರು ಸರಬರಾಜು ಯೋಜನೆ ಬಗ್ಗೆ

೨೧೨. ಶ್ರೀ ಬಸವರಾಜ ಶಂಕರಪ್ಪ ಪಾಟೀಲ (ಬಸವಕಲ್ಯಾಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬಸವಕಲ್ಯಾಣ ಪಟ್ಟಣಕ್ಕೆ ಜೇಟುವಾಲ ಕುಂದಾ ಟ್ಯಾಂಕಿನಿಂದ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದವರ ಮುಂದೆ ಇದೆಯೇ ?

(ಆ) ಹಾಗಿದ್ದಲ್ಲಿ, ಇದಕ್ಕೆ ಎಷ್ಟು ಹಣ ಖರ್ಚು ಮಾಡಲಾಗುವುದು.

(ಇ) ಈ ನೀರು ಸರಬರಾಜು ಯೋಜನೆಯನ್ನು ಎಷ್ಟು ಅವಧಿಯಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಎಂ. ಚಂದ್ರಶೇಖರ್(ನಗರಾಭಿವೃದ್ಧಿ ಮಂತ್ರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

(ಅ) ಇದೆ.

(ಆ) ೪೯.೦೧ ಲಕ್ಷ ರೂಗಳ ಅಂದಾಜನ್ನು ತಯಾರಿಸಲಾಗಿದೆ.

(ಇ) ಈ ಯೋಜನೆಗೆ ಮಂಜೂರಾತಿ ಕೊಟ್ಟ ನಂತರ ತೆಗೆದುಕೊಳ್ಳಲಾಗುವುದು.

ಬೆಂಗಳೂರಿಂ ಅಭಿವೃದ್ಧಿ ಪ್ರಾಧಿಕಾರದ ಸಿಮೆಂಟ್ ವ್ಯವಹಾರದ ಬಗ್ಗೆ

೧೧೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು (ಬಿಡಿಎ) ಮನೆಗಳನ್ನು ಕಟ್ಟಿಸಲು ಸ್ವಯಂ ವಸತಿ ನೆರವು ಯೋಜನೆ ಪ್ರಕಾರ ಕಳೆದ ಸಾಲಿನಲ್ಲಿ ಎಷ್ಟು ಪ್ರಮಾಣದ ಸಿಮೆಂಟನ್ನು ಕೊಳ್ಳಲು ನಿರ್ಧರಿಸಿದ್ದರು ? (ಒಂದು ವರ್ಷದ ಮಾಹಿತಿ ಒದಗಿಸುವುದು)

(ಆ) ಅದಕ್ಕೆ ವಿಚಾರಿಸುವ ಮೊತ್ತವೆಷ್ಟು ?

(ಇ) ಇದನ್ನು ಯೋಜಿತ ಮನೆಗಳನ್ನು ಕಟ್ಟಲು ಉಪಯೋಗಿಸಲಾಗಿದೆಯೆ ?

(ಈ) ಹಾಗಿದ್ದಲ್ಲಿ ಎಷ್ಟು ಸಿಮೆಂಟನ್ನು ಉಪಯೋಗಿಸಲಾಗಿದೆ ಮತ್ತು ಇನ್ನೆಷ್ಟು ಸಿಮೆಂಟು ಉಳಿದಿದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು)

(ಅ) ಏನೂ ಇಲ್ಲ.